॥ಶ್ರೀ:॥









ಕರ್ನಾಟಕದಲ್ಲೇ ಪ್ರಪ್ರಥಮವಾಗಿ

# ಏಕಾಕೀ ಸಂಪೂರ್ಣ ಋಗ್ವೇದ ಘನಪಾರಾಯಣ

ದಿನಾಂಕ : ೨೨-೦೫-೨೦೨೩ ರಿಂದ ೧೨-೦೭-೨೦೨೩ರ ವರೆಗೆ

ಜ್ಯೇಷ್ಠ ಶುಕ್ಲ ತೃತೀಯಾ ಸೋಮವಾರದಿಂದ ಆಷಾಢ ಬಹುಳ ದಶಮಿ ಬುಧವಾರ ದವರೆಗೆ

ವಕ್ತಾ : ಘನಪಾಠಿ ಶ್ರೀ ಸುಮುಖ ಭಾರದ್ವಾಜ ಶರ್ಮಾ

ಶ್ರೋತಾ : ಘನಪಾಠಿ ಶ್ರೀ ನೀಲಕಂಠ ಜೋಗಳೇಕರ್

: ಸ್ಥಳ :

ಶ್ರೀ ಶೃಂಗೇರಿ ಶಂಕರಮಠ , ಶಂಕರಪುರಂ,

ಬೆಂಗಳೂರು - ೫೬೦ ೦೦೪



||ಶ್ರೀಗುರುಭ್ಯೋನಮಃ||

ಸನಾತನ ಧರ್ಮದ ಮೂಲವಾದ ವೇದಗಳ ರಕ್ಷಣೆಯಲ್ಲಿ ತೊಡಗಿರುವ ವೇದರಕ್ಷಾ ಗುರುಕುಲವು ದಕ್ಷಿಣಾಮ್ನಾಯ ಶ್ರೀಶಾರದಾ ಪೀಠದ ಉಭಯ ಜಗದ್ಗುರುಗಳ ಪೂರ್ಣಾನುಗ್ರಹದೊಂದಿಗೆ

**ಕರ್ನಾಟಕದಲ್ಲೇ ಪ್ರಪ್ರಥಮವಾಗಿ**

# ಏಕವಕ್ತಾ ಏಕಶ್ರೋತಾ ಎಂಬೀ ವಿಶಿಷ್ಟಪದ್ಧತಿಯ ಸಂಪೂರ್ಣ ಋಗ್ವೇದ ಘನಪಾರಾಯಣವನ್ನು

**ಹಮ್ಮಿಕೊಂಡಿದೆ.**

**ದಿನಾಂಕ : ೨೨-೦೫-೨೦೨೩ ಜ್ಯೇಷ್ಠ ಶುಕ್ಲ ತೃತೀಯಾ ಸೋಮವಾರದಿಂದ**

**೧೨-೦೭-೨೦೨೩ ಆಷಾಢ ಬಹುಳ ದಶಮಿ ಬುಧವಾರ ದವರೆಗೆ**

ಪ್ರತಿದಿನ ಐದು ಘಂಟೆಗಳಕಾಲ ನಡೆಯುವ ಈ ಪಾರಾಯಣವು ಮೂರ್ಧನ್ಯ ವಿದ್ವಾಂಸರ ಸಮ್ಮುಖದಲ್ಲಿ ಸಂಪನ್ನಗೊಳ್ಳಲಿದೆ. ಪರೀಕ್ಷೆ, ಪ್ರತಿಭೆ, ಪ್ರತಿಷ್ಠೆಗಳ ಸಾಕಾರವಾದ ಈ ಪಾರಾಯಣದಲ್ಲಿ ಪಾಲ್ಗೊಂಡು ಪ್ರೋತ್ಸಾಹಿಸಿ ವೇದಮಾತೆಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಿದ್ದೇವೆ.

**ವಕ್ತಾ : ಘನಪಾಠಿ ಶ್ರೀ ಸುಮುಖ ಭಾರದ್ವಾಜ ಶರ್ಮಾ**

**ಶ್ರೋತಾ : ಘನಪಾಠಿ ಶ್ರೀ ನೀಲಕಂಠ ಜೋಗಳೇಕರ್**

**: ಸ್ಥಳ :**

**ಶ್ರೀ ಶೃಂಗೇರಿ ಶಂಕರಮಠ , ಶಂಕರಪುರಂ,**

**ಬೆಂಗಳೂರು - ೫೬೦ ೦೦೪**



## ಕಾರ್ಯಕ್ರಮದ ವಿವರಗಳು

## ದಿನಾಂಕ ೨೨-೦೫-೨೦೨೩

ಬೆಳಗ್ಗೆ 7:00 ಘಂಟೆಗೆ : ಗಣಪತಿ ಹೋಮ

8:00 ಘಂಟೆಗೆ : ಗುರುವಂದನೆ, ಆಚಾರ್ಯವರಣ

9:00 ಘಂಟೆಗೆ : ಘನ ಪಾರಾಯಣ ಪ್ರಾರಂಭ

ದಿನಾಂಕ 23-05-2023 ರಿಂದ 12-07-2023 ರ ವರೆಗೆ ಪ್ರತಿದಿನ

ಬೆಳಗ್ಗೆ 7:30 ರಿಂದ 12:30 ರ ವರೆಗೆ ಘನ ಪಾರಾಯಣ

12-07-2023 ಸಾಯಂಕಾಲ 4:30 ರಿಂದ ಸಮಾರೋಪ ಸಮಾರಂಭ



ಋಗ್ವೇದವು 10 ಮಂಡಲ, 8 ಅಷ್ಟಕ (64 ಅಧ್ಯಾಯ)
10552 ಮಂತ್ರ , 1,55,033 ಪದಗಳನ್ನೊಳಗೊಂಡಿರುವ
ಅತೀಪ್ರಾಚೀನ ಗ್ರಂಥ. ಮಂತ್ರವೆಂಬುದು ನ್ಯಾಯ, ಮೀಮಾಂಸ,
ವ್ಯಾಕರಣ, ವೇದಾಂತಾದಿಗಳನ್ನು ತನ್ನೊಳಗೆ ಹುದುಗಿಸಿಟ್ಟುಕೊಂಡಿರುವ
ದೇವತಾ ಸಾನ್ನಿಧ್ಯವಿರುವ ಅಕ್ಷರಾಗಾರವಾಗಿದೆ.
ಉದಾತ್ತಾನುದಾತ್ತಸ್ವರಿತಗಳಿಂದ ಘೋಷಿಸಲ್ಪಟ್ಟಿರುವ ಈ ಪದಗಳನ್ನು
ವರ್ಣ, ಸ್ವರ, ಮಾತ್ರಾಕಾಲಗಳ ವೈಪರೀತ್ಯವಿಲ್ಲದೆ
ಮನೋಧರ್ಮಕ್ಕಾಸ್ಪದವಿಲ್ಲದೆ ಕಾಪಾಡಲು, ಋಷಿಗಳಿಂದ
ಹಲವು ಮಾರ್ಗಗಳು ಕಂಡುಕೊಳ್ಳಲ್ಪಟ್ಟು ತದನುಸಾರಿಯಾಗಿಯೇ
ಈಗಿನವರೆಗೆ ವೈದಿಕಪರಂಪರೆ ಮುಂದುವರೆಯುತ್ತಿರುವುದು ಸನಾತನ
ಧರ್ಮೀಯರ ಹಿರಿಮೆಯಾಗಿದೆ.

## ಏಕವಕ್ತಾ । ಏಕಶ್ರೋತಾ।

ಮೂಲಸಂಹಿತಾಪಾಠವನ್ನು ಪದಗಳಾಗಿ ವಿಂಗಡಿಸಿ ಕ್ರಮಪಾಠದಿಂದ ಘೋಷಿಸಿ ಮಂತ್ರಗಳ ಅಕ್ಷರ; ಸ್ವರ, ಮಾತ್ರಾಕಾಲಗಳ ಪಕ್ವತೆಯನ್ನು ತಿಳಿದುಕೊಂಡು ಅಷ್ಟವಿಕೃತಿಪಾಠಗಳಾದ ಜಟಾ, ಮಾಲಾ, ಶಿಖಾ,ರೇಖಾ, ಧ್ವಜ,ದಂಡ,ರಥ ಘನಪಾಠಗಳಿಂದ ಮೆರುಗುಗೊಳಿಸಿ ಕಂಠಸ್ಥೀಕರಿಸುವುದು, 12 ಸಂವತ್ಸರಗಳ ತಪಸ್ಸಾಧನೆಯಾಗಿದೆ. ಸಂಪೂರ್ಣ ಋಗ್ವೇದ ಘನಪಾರಾಯಣವೆಂಬುದು ಸುಮಾರು 320 ಘಂಟೆಗಳಕಾಲು 8/10 ವಿದ್ವಾಂಸರು ಪದವಿಭಾಗವಾಗಿಸಿ ನಡೆಸಿಕೊಡುವ ವೇದಪಠಣಕ್ರಮ. ಶ್ರೀಮಠಗಳಾದಿ ಪರೀಕ್ಷಾ ಕೇಂದ್ರಗಳಿಂದ ಒರೆಗೆ ಹಚ್ಚಲ್ಪಟ್ಟ ವಿದ್ಯಾರ್ಥಿಯು ಸಂಪೂರ್ಣ ಗ್ರಂಥವನ್ನು ತಾನೊಬ್ಬನೇ(ಏಕವಕ್ತಾ) ಸಮರ್ಥಘನಪಾಠಿಗಳೆದುರು(ಏಕಶ್ರೋತಾ) ಕಂಠಸ್ಥವಾಗಿ ಪಾರಾಯಣಮಾಡುವುದೇ ಇದರ ವೈಶಿಷ್ಟ್ಯ.

॥ ಸರ್ವೇಜನಾಃ ಸುಖಿನೋಭವಂತು ॥